ಆ) ಈ ಮೊತ್ತವು ಎಷ್ಟು ವರ್ಷಗಳಿಂದ ಬಾಕಿ ಇದೆ ?

ಇ) ಬಾಕಿಯನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಈ) ಹಲವಾರು ವರ್ಷಗಳಿಂದ ಅಬಕಾರಿ ಬಾಕಿಯನ್ನು ಉಳಿಸಿಕೊಂಡಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆಯೇ ?

ಶ್ರೀ. ರಮಾನಾಥ್ ರೈ (ಅಬಕಾರಿ ರಾಜ್ಯ ಸಚಿವರು):-

ಅ) ರೂ. 222.76 ಕೋಟಿ (ದಿನಾಂಕ 25-08-94 ರ ವರೆಗೆ)

ಆ) ಸುಮಾರು 49 ವರ್ಷಗಳಿಂದ (1945-46 ರಿಂದ 94-95 ರ ವರೆಗೆ)

ಇ) ಬಾಕಿ ಇರುವ ಮೊತ್ತದಲ್ಲಿ ರೂ. 80,51,05,303 ಗಳು ನ್ಯಾಯಾಲಯದ ತಡೆಯಾಜ್ಞೆಯಿಂದ ಕೂಡಿರುವುದರಿಂದ ಇದನ್ನು ತಡೆಯಾಜ್ಞೆ ತೆರವಾದ ಕೂಡಲೇ ವಸೂಲಿ ಮಾಡಲಾಗುವುದು. ರೂ. 28.55 ಕೋಟಿ ಬಾಕಿ ಮೊತ್ತ ಭೂ ಕಂದಾಯ ಬಾಕಿಯಂತೆ ಪರಿವರ್ತಿಸಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ವಸೂಲಾತಿಗೆ ಆದೇಶಿಸಲಾಗಿದೆ. ಈ ಪೈಕಿ ಕೆಲವು ಗುತ್ತಿಗೆದಾರರು ಹೊರ ರಾಜ್ಯಗಳಲ್ಲಿ ವಾಸವಾಗಿರುವುದರಿಂದ ಭಾರತೀಯ ಭೂ ಕಾಯಿದೆ (ಐ. ಆರ್. ಆರ್. ಕಾಯ್ದೆ) ಅನ್ವಯ ವಸೂಲಾತಿಗೆ ಕೇಳಿಕೊಳ್ಳಲಾಗಿದೆ. ಇನ್ನುಳಿದ ಬಾಕಿ ಮೊತ್ತ ಇಲಾಖೆಯ ಮುಖೇನ ವಸೂಲಾತಿಗೆ ತೀವ್ರ ಕ್ರಮ ಕೈಗೊಳ್ಳಲಾಗಿದೆ.

ಈ) ಬಾಕಿದಾರರ ಪಟ್ಟಿಯಲ್ಲಿ ಸೇರಿಸಲಾಗಿರುತ್ತದೆ.

ವಿಷಯ : ಕುಂದಾಪುರ ಕ್ಷೇತ್ರದಲ್ಲಿರುವ ಪಶುವೈದ್ಯ ಚಿಕಿತ್ಸಾಲಯಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 435 (674)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ವಿಧಾನ ಸಭಾ ಕ್ಷೇತ್ರದಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

ಆ) ಕೆಲವು ಪಶುವೈದ್ಯ ಆಸ್ಪತ್ರೆಗಳಲ್ಲಿ ಪಶುವೈದ್ಯರುಗಳ ನೇಮಕಾತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಬಂದಲ್ಲಿ ಆ ಖಾಲಿಯಿರುವ ಜಾಗವನ್ನು ಯಾವಾಗ ತುಂಬಲಾಗುವುದು ;

ಈ) ಈ ಕ್ಷೇತ್ರದಲ್ಲಿ ಎಲ್ಲಿ ಎಲ್ಲಿ ಖಾಲಿ ಇದೆ, ವಿವರವನ್ನೊದಗಿಸುವುದು ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) :-

ಅ) ಪಶು ಆಸ್ಪತ್ರೆ - 1

ಪಶುಚಿಕಿತ್ಸಾಲಯ - 4

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ. - 6

ಆ) ಹೌದು.

ಇ) ಸಧ್ಯದಲ್ಲೇ ಭರ್ತಿ ಮಾಡಲಾಗುವುದು.

ಈ) ಪಶುಚಿಕಿತ್ಸಾಲಯ, ಬಿದ್ಕಲ್‌ಕಟ್ಟೆ ಇಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ.

ವಿಷಯ : ಗ್ರಾಮಾಂತರ ಪ್ರದೇಶಗಳಲ್ಲಿ ತ್ರಿವರ್ಣ ಪಡಿತರ ಚೀಟಿ. ನೀಡಿದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 437 (433)

ಶ್ರೀ ಡಿ. ಆರ್. ಪಾಟೀಲ್ (ಗದಗ್) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತ್ರಿವರ್ಣ ಪಡಿತರ ಕಾರ್ಡುಗಳ ವಿತರಣೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ನಡೆಯದಿರುವುದು ಹಾಗೂ ಅರ್ಹ ಫಲಾನುಭವಿಗಳಲ್ಲಿ ಅನೇಕರಿಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ಹಾಗೂ ಇನ್ನೂ ಎಷ್ಟು ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು ?

ಶ್ರೀ. ಬಿ. ಎನ್. ಪಾಟೀಲ್ (ಸಾಸನೂರು) (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.):-

ಅ) ಇಲ್ಲ.

ಆ) ತ್ರಿವರ್ಣ ಕಾರ್ಡುಗಳ ವಿತರಣೆಯನ್ನು ಗ್ರಾಮಾಂತರದಲ್ಲಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ನಿಡುವಲ್ಲಿ ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳುವಳಿಕೆ ನೀಡಲಾಗಿದೆ. ಈಗಾಗಲೇ 51.82 ಲಕ್ಷ ಫಲಾನುಭವಿಗಳನ್ನು ಗುರುತಿಸಿ ಅವರುಗಳಲ್ಲಿ 50.82 ಲಕ್ಷ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಉಳಿದ ಫಲಾನುಭವಿಗಳಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗಿದೆ.